ಎಂ.ಪಿ.ಎಂ. ಕಾರ್ಖಾನೆ

752(856) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :

ಅ) ಭದ್ರಾವತಿಯ ಎಂಪಿಎಂ ಕಾರ್ಖಾನೆಯಲ್ಲಿ 2008–09, 2009–10 ಹಾಗೂ 2010–11ನೇ ಸಾಲುಗಳಲ್ಲಿ ಪ್ರತಿ ವರ್ಷ ಎಷ್ಟು ಲಾಭಗಳಿಸಿದೆ ಮತ್ತು ಎಷ್ಟು ನಷ್ಟ ಅನುಭವಿದೆ ; ಹಾಗಿದ್ದಲ್ಲಿ, ವಾರ್ಷಿಕ ವಿವರ ನೀಡುವುದು ;

ಆ) ನಷ್ಟದಲ್ಲಿದ್ದಲ್ಲಿ, ಅದಕ್ಕಿರುವ ನಿರ್ದಿಷ್ಟ ಕಾರಣಗಳೇನು ;

ಇ) ಎಂಪಿಎಂ ಕಾರ್ಖಾನೆಯಲ್ಲಿ 2008–09, 2009–10 ಹಾಗೂ 2010–11ರಲ್ಲಿ ಕಾನು ಉದ್ಯಮಕ್ಕೆ ಮಾಡಿದ ವೆಚ್ಚವೆಷ್ಟು ; ಮೇಲ್ಕಂಡ ಸಾಲುಗಳಲ್ಲಿ ಎಂ.ಪಿ.ಎಂ.ಗೆ ಕಾನು ಉದ್ಯಮದ ಮೂಲಕ ಬಂದ ಆದಾಯವೆಷ್ಟು ;

ಈ) ಎಂ.ಪಿ.ಎಂ.ನ ನೌಕರರಿಗೆ ಕಾಲ ಕಾಲಕ್ಕೆ ಸರಿಯಾಗಿ ಪ್ರತಿ ತಿಂಗಳು ಸಂಬಳ, ತುಟ್ಟಿಭತ್ಯೆ, ಸಾರಿಗೆ ಹಾಗೂ ಇತರೆ ಭತ್ಯೆಗಳು ಪಾವತಿ ಮಾಡಲಾಗುತ್ತಿದೆಯೇ ; ಹಾಗಿಲ್ಲದಿದ್ದಲ್ಲಿ, ಕಾರಣಗಳೇನು ;

ಉ) ಎಂ.ಪಿ.ಎಂ.ನ ಹಾಲಿ ಅಧ್ಯಕ್ಷರು ನೇಮಕಗೊಂಡಿದ್ದು ಯಾವಾಗ ; ಅವರು ಅಧಿಕಾರ ಪಡೆದ ದಿನದಿಂದ ಈವರೆಗೆ ಅವರು ಪಡೆದ ಗೌರವಧನ, ಪ್ರಯಾಣಭತ್ಯೆ, ದಿನ ಭತ್ಯೆ ಮತ್ತು ಎಷ್ಟು ಖರ್ಚು ವೆಚ್ಚಗಳನ್ನು ಮಾಡಿದ್ದಾರೆ (ವಿವರ ನೀಡುವುದು) ?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) 2008–09 ರೂ.16.33 ಕೋಟಿ (ಲಾಭ)
2009–10 ರೂ.77.23 ಕೋಟಿ (ನಷ್ಟ)
2010–11 ರೂ.59.70 ಕೋಟಿ (ನಷ್ಟ ಡಿಸೆಂಬರ್ 2010ರವರೆಗೆ)

ಆ) ನಷ್ಟವು ಈ ಕೆಳಗಿನ ಕೆಲವು ಕಾರಣಗಳಿಂದಾಗಿ ಸಂಭವಿಸಿದೆ :

1) ಲಾಭಾಂಶ ಹೆಚ್ಚಿರುವ ಲಿಖಿತ ಮತ್ತು ಮುದ್ರಣ ಕಾಗದದ ಉತ್ಪಾದನೆಯ ಸೀಮಿತ ಉತ್ಪಾದನಾ ಕ್ಷಮತೆ (30,000 ಮೆ.ಟನ್ನುಗಳು)

2) ನ್ಯೂಸ್‌ಪ್ರಿಂಟ್‌ನ ಉತ್ಪಾದನೆಯ ಮೇಲೆ ಬಹಳವಾಗಿ ನಿರ್ಭರವಾಗಿರುವಿಕೆ (75,000 ಮೆ.ಟನ್ನುಗಳು) ಆಮದು ಮಾಡಿಕೊಳ್ಳಲಾದ ನ್ಯೂಸ್‌ಪ್ರಿಂಟ್‌ನ ಪರಿಮಾಣ ಬಹಳವಾಗಿ ಹೆಚ್ಚಾದುದರಿಂದ ಮಾರುಕಟ್ಟೆಯ ದರದಲ್ಲಿ ಉಂಟಾದ ಬೆಲೆ ಕುಸಿತ.

3) ಹಳತಾದ ಯಂತ್ರಗಳು ಮತ್ತು ತಂತ್ರಜ್ಞಾನದಿಂದಾದ ಹೆಚ್ಚು ಉತ್ಪಾದನಾ ವೆಚ್ಚ (ಯಂತ್ರಗಳ ಸರಾಸರಿ ಆಯಸ್ಸು 69 ವರ್ಷಗಿಂದ 29 ವರ್ಷಗಳಾಗಿದೆ).

4) ಹೆಚ್ಚಿನ ಕಬ್ಬಿನ ಬೆಲೆ, ಕುಂಠಿತವಾದ ಸಕ್ಕರೆ ಇಳುವರಿ ಮತ್ತು ಸಕ್ಕರೆ ದರದಲ್ಲಿ ಇಳಿತ.

5) ನೌಕರರ ಸಂಬಳದ ಹೊರೆ (ಕೈಗಾರಿಕಾ ಸರಾಸರಿ ಮಾರಾಟದ ಶೇ.10ಕ್ಕೆ ವಿರುದ್ಧವಾಗಿ ಎಂಪಿಎಂನ ಸಂಬಳ, ಮಾರಾಟದ ಶೇ.25ರಷ್ಟಿದೆ).

6) ಹೆಚ್ಚಿನ ವಿದ್ಯುಚ್ಛಕ್ತಿ ಖರ್ಚು (ಕೆಪಿಟಿಸಿಎಲ್ ನಿಂದ ಖರೀದಿಸಿದ ರೂ. 25 ಕೋಟಿಗಳ ವಾರ್ಷಿಕ ರೂ.10 ರಿಂದ 12 ಕೋಟಿಗಳಷ್ಟು ಹೆಚ್ಚಾಗಿದೆ) ಕೈಗಾರಿಕಾ ಸರಾಸರಿಯಾದ ಶೇ.19ರ ವಿರುದ್ಧವಾಗಿ ವಿದ್ಯುತ್ ಮತ್ತು ಉರುವಲ ಖರ್ಚು ಉತ್ಪಾದನಾ ವೆಚ್ಚದ ಶೇ. 24ರಷ್ಟಿದೆ.

ಇ) ಅರಣ್ಯ ಅಭಿವೃದ್ಧಿಗಾಗಿ ಎಂಪಿಎಂ 2008–09, 2009–10 ಮತ್ತು 2010–11ನೇ ವರ್ಷಗಳಲ್ಲಿ ಮಾಡಿದ ವೆಚ್ಚ ಮತ್ತು ಲಭ್ಯವಾದ ಮೊತ್ತ:

		(ರೂ. ಕೋಟಿಗಳಲ್ಲಿ)
2008–09	ರೂ. 13.28	ರೂ. 18.93
2009–10	ರೂ. 16.96	ರೂ. 12.34
2010–11	ರೂ. 8.66	ರೂ. 8.80

ಈ) ಹೌದು. ದಿನಾಂಕ: 1–7–2010ರಿಂದ ಹೆಚ್ಚುವರಿ ತುಟ್ಟಿಭತ್ಯೆ ಹೊರತುಪಡಿಸಿ.

ಉ) ಕಂಪನಿಯ ಪ್ರಸಕ್ತ ಅಧ್ಯಕ್ಷರು ದಿ: 26–2–2009ರಂದು ಅಧಿಕಾರವನ್ನು ವಹಿಸಿಕೊಂಡಿರುತ್ತಾರೆ. ಅವರಿಗೆ ಯಾವುದೇ ಗೌರವಧನ

ನೀಡಲಾಗುತ್ತಿಲ್ಲ. ಅವರಿಗೆ ನೀಡಲಾಗುತ್ತಿರುವ ಇತರೆ ಭತ್ಯೆಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

"ಅನುಬಂಧ – ಅ"

ಅಧ್ಯಕ್ಷರು, ಶ್ರೀ ಆರಗ ಜ್ಞಾನೇಂದ್ರ ಅವರಿಗೆ ಫೆಬ್ರವರಿ 2009ರಿಂದ ಫೆಬ್ರವರಿ 2011ರ ವರೆಗೆ ನೀಡಲಾದ ಭತ್ಯೆಗಳ ವಿವರ:

ತಿಂಗಳು	ಮನೆ ಬಾಡಿಗೆಭತ್ಯೆ	ಟಿ ಎ ಮತ್ತು ಡಿ ಎ ಕನ್ವೆಯನ್ಸ್ ಭತ್ಯೆ	ಸಂಪ್ಟಯರಿ ಭತ್ಯೆ
ಫೆಬ್ರವರಿ 2009	–	–	–
ಮಾರ್ಚ್ 2009	–	–	–
ಏಪ್ರಿಲ್ 2009	–	–	–
ಮೇ 2009	30,000	–	–
ಜೂನ್ 2009	30,000	1,01,480	
ಜುಲೈ 2009	30,000	26,560	
ಆಗಸ್ಟ್ 2009	30,000	63,940	25,000
ಸೆಪ್ಟೆಂಬರ್ 2009	30,000	–	–
ಅಕ್ಟೋಬರ್ 2009	30,000	56,806	–
ನವೆಂಬರ್ 2009	30,000		–
ಡಿಸೆಂಬರ್ 2009	30,000	52,063	–
ಜನವರಿ 2010	30,000	43,903	–
ಫೆಬ್ರವರಿ 2010	30,000	53,278	25,000
ಮಾರ್ಚ್ 2010	30,000	56,398	–
ಏಪ್ರಿಲ್ 2010	30,000	43,718	–
ಮೇ 2010	30,000	37,678	–
ಜೂನ್ 2010	30,000	40,678	–
ಜುಲೈ 2010	30,000	53,278	–
ಆಗಸ್ಟ್ 2010	30,000	45,700	–
ಸೆಪ್ಟೆಂಬರ್ 2010	30,000	51,940	–
ಅಕ್ಟೋಬರ್ 2010	30,000	45,220	–
ನವೆಂಬರ್ 2010	30,000	45,700	–
ಡಿಸೆಂಬರ್ 2010	30,000	46,342	–
ಜನವರಿ 2011	30,000	52,222	–
ಫೆಬ್ರವರಿ 2011	30,000	–	–
ಒಟ್ಟು	6,60,000	9,15,904	50,000